## 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 204 / 2017

ಪಿರ್ಯಾದುದಾರರು : ತಾವರೆಕೆರೆ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ : ಚಂದ್ರಹಾಸ ಎಸ್ ಬಿನ್ ಲೇಟ್ ಶಿವಶಿಂಕರ್ ಪಿ**
**36 ವರ್ಷಗಳು, ವಿಜಯ ಫಾರಂ ಹೌಸ್,**
**ಸಾಬರಪಾಳ್ಯ, ಯೆಲಚಗುಪ್ಪೆ, ತಾವರೆಕೆರೆ**
**ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.**

## ದೋಷರೋಪಣೆ

( ಶ್ರೀಮತಿ. ನಳಿನ ಎಸ್.ಸಿ, ಪ್ರಭಾರ 2 ನೇ ಅಪರ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷರೋಪಣೆ ಮಾಡುತ್ತಿದ್ದೇನೆ )

ದಿನಾಂಕಃ 011-08-2016 ರಂದು ರಾತ್ರಿ 12 ಗಂಟೆಯ ಸಮಯದಲ್ಲಿ ತಾವರೆಕೆರೆ ಪೋಲಿಸ್ ಠಾಣೆಯ ಸರಹದ್ದು, ತಾವರೆಕೆರೆ ಹೋಬಳಿ, ಯಲಚಗುಪ್ಪೆ ಬಳಿ ಇರುವ ಸಾಬರಪಾಳ್ಯದ ವಿಜಯ ಫಾರಂ ಹೌಸ್ ನಲ್ಲಿ ಚಾಸಾ-1ಃಶಿವಕುಮಾರ ಎಂ, ಚಾಸಾ-2ಃಸಂತೋಷಕುಮಾರ ಮತ್ತು ಚಾಸಾ-3ಃಅಂತೋನಿಪ್ರಸಾದ್ ರವರುಗಳು ಆರೋಪಿ 1 ರವರ ಜೊತೆ ಕುಡಿದು ಪಾರ್ಟಿ ಮಾಡುತ್ತಿರುವಾಗ ಆರೋಪಿಯಾದ ನೀವು ಯಾವುದೋ ವಿಚಾರಕ್ಕೆ ವಿನಾಃ ಕಾರಣ ಜಗಳ ತೆಗೆದು, ಚಾಸಾ-2 ರವರಿಗೆ ಬಾಯಿಗೆ ಬಂದಂತೆ ಬೈದು ಸಾರ್ವಜನಿಕವಾಗಿ ಅವಮಾನ ಪಡಿಸಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-504 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿಯಾದ ನೀವು ಚಾಸಾ-2ಃ ಸಂತೋಷಕುಮಾರ ರವರಿಗೆ ಪ್ರಾಣ ಬೆದರಿಕೆ ಹಾಕಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-506 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ

ಸಮಯದಲ್ಲಿ ಆರೋಪಿತರಾದ ನೀವು ಚಾಸಾ-2ಃ ಸಂತೋಷಕುಮಾರ ರವರಿಗೆ ಅಪಾಯಕಾರಿ ಆಯುಧವಾದ ಮಚ್ಚಿನಿಂದ ತಲೆಗೆ, ಕುತ್ತಿಗೆಗೆ ಮತ್ತು ಎರಡು ಕೈಗಳಿಗೆ ಹೊಡೆದು ರಕ್ತಗಾಯ ಪಡಿಸಿದ್ದು, ಚಾಸಾ-2 ರವರಿಗೆ ಚಿಕಿತ್ಸೆ ನೀಡಿದ ಚಾಸಾ-6ಃ ವಿಜಯ್ ಎಂಬುವರು ಚಾಸಾ-2 ರವರಿಗೆ ಸಾಮಾನ್ಯ ಸ್ವರೂಪದ ರಕ್ತಗಾಯಗಳಾಗಿರುತ್ತದೆಂದು ಅಭಿಪ್ರಾಯ ಪಟ್ಟು ದೃಢೀಕರಣ ಪತ್ರ ನೀಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-324 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನೀವು ಈ ಮೇಲಿನ ಆಪಾದನೆಯನ್ನು ಕೇಳಿದಿರಾ ?

**ಆರೋಪಿ ಉತ್ತರ ಃ**

ಪ್ರಶ್ನೆ-2 ಃ ನೀವು ದೋಷರೋಪಣೆ ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

**ಆರೋಪಿ ಉತ್ತರ ಃ**

( ಈ ಮೇಲ್ಕಂಡ ದೋಷರೋಪಣೆಯನ್ನು ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲ ನಿರ್ದೇಶಿಸಿತ್ತೇನೆ )

ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 16-11-2021 ರಂದು ಸಹಿ ಮಾಡಿರುತ್ತಾರೆ )

( ನಳಿನ ಎಸ್.ಸಿ. )
ಪ್ರಭಾರ 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.